ಕರ್ನಾಟಕ ವಿಧಾನ ಸಭೆ

ಮಂಗಳವಾರ 9 ನೇ ಮಾರ್ಚ್ 1993

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 10.15 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : (ಶ್ರೀ ವಿ. ಎಸ್. ಕೌಜಲಗಿ) ಅವರು ಪೀಠವನ್ನು ಅಲಂಕರಿಸಿದ್ದರು.

ಸಂತಾಪ ಸೂಚನೆ

ಅಧ್ಯಕ್ಷರು :- ಹಿರಿಯ ರಾಜಕಾರಣಿ ವಿಧಾನ ಸಭೆಯ ಮಾಜಿ ಶಾಸಕರಾದಂತಹ ಶ್ರೀ ಬಿ. ಭಾಸ್ಕರ ಶೆಟ್ಟಿಯವರು ದಿನಾಂಕ : 6-3-93ರಂದು ನಿಧನರಾದ ಸುದ್ದಿಯನ್ನು ಈ ಸದನಕ್ಕೆ ತಿಳಿಸಲು ವಿಷಾದಿಸುತ್ತೇನೆ. ವೃತ್ತಿಯಲ್ಲಿ ಕೃಷಿಕರು ಹಾಗೂ ಸಮಾಜ ಸೇವಕರಾಗಿದ್ದ ಶ್ರೀಯುತರು ಮೂರು, ನಾಲ್ಕು, --- ಐದು. ಮತ್ತು ಆರನೆಯ ವಿಧಾನ ಸಭೆಗೆ ನಾಲ್ಕು ಬಾರಿ ಸತತವಾಗಿ ಚುನಾಯಿತರಾಗಿ ಕಾಪು ಕ್ಷೇತ್ರವನ್ನು ಪ್ರತಿನಿಧಿಸಿ 1978ರಿಂದ 83ರವರೆಗೆ ಸರ್ಕಾರಿ ಮುಖ್ಯ ಸಚೇತಕರಾಗಿ ಸೇವೆ ಸಲ್ಲಿಸಿರುವುದರ ಜೊತೆಗೆ ಅನೇಕ ಶಾಸಕಾಂಗದ ಸಮಿತಿಗಳ ಸದಸ್ಯರಾಗಿ ಕೈಗಾರಿಕಾ, ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿ, ಮೀನುಗಾರಿಕಾ ನಿಗಮದ ಅಧ್ಯಕ್ಷರಾಗಿ ಕಾಪು ವ್ಯವಸಾಯ ಸೇವಾ ಸಹಕಾರ ಸಂಘದ ಪ್ರಸ್ತುತ ಅಧ್ಯಕ್ಷರಾಗಿ ಸಮಾಜದ ಸರ್ವತೋಮುಖ ಅಭಿವೃದ್ಧಿಗಾಗಿ ಸೇವೆ ಸಲ್ಲಿಸಿ ಕೀರ್ತಿಶ್ರೇಷ್ಠರಾಗಿದ್ದಾರೆ.

ಮೃತರ ಗೌರವಾರ್ಥ ಮಾನ್ಯ ಸದಸ್ಯರೆಲ್ಲರೂ ಎದ್ದುನಿಂತು ಒಂದು ನಿಮಿಷಕಾಲ ಮೌನವನ್ನು ಆಚರಿಸಬೇಕೆಂದು ಕೋರುತ್ತೇನೆ.

(ಸದನವು ಮೃತರ ಗೌರವಾರ್ಥ ಒಂದು ನಿಮಿಷಕಾಲ ಮೌನವನ್ನು ಆಚರಿಸಿತು)

ಕ.ರಾ.ರ.ಸಾ. ಸಂಸ್ಥೆಯ ಬಸ್ಸುಗಳಲ್ಲಿ ಕಾರ್ಯನಿರ್ವಹಿಸುವ ನಿರ್ವಾಹಕರ ದುರ್ನಡತೆ.

282 (1503) ಶ್ರೀ ಮುನಿನರಸಿಂಹಯ್ಯ, (ದೇವನಹಳ್ಳಿ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :-

ಅ) ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವಾಹನಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನಿರ್ವಾಹಕರು ಪ್ರಯಾಣಿಕರೊಂದಿಗೆ ಸೌಜನ್ಯದಿಂದ ವರ್ತಿಸದೇ ದುರ್ನಡತೆಯಿಂದ ವರ್ತಿಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ.

ಆ) ಹಾಗಿದ್ದಲ್ಲಿ ರಾಜ್ಯದಲ್ಲಿ ಕ. ರಾ. ರ. ಸಾ. ಸಂಸ್ಥೆಯಲ್ಲಿನ ಬಸ್ಸುಗಳಲ್ಲಿ ಈ ರೀತಿಯಾಗಿ ದುರ್ನಡತೆಯಿಂದ ವರ್ತಿಸುವ ನಿರ್ವಾಹಕರ ಹಾಗೂ ವಾಹನ ಚಾಲಕರ ಮೇಲೆ ಬಂದ ದೂರುಗಳ ಸಂಖ್ಯೆ ಎಷ್ಟು ಇಂತಹ ನಿರ್ವಾಹಕರ ಹಾಗೂ ಚಾಲಕರ ವಿರುದ್ಧ ಕ್ರಮ ಕೈಕೊಳ್ಳಲಾಗುವುದೇ.

ಇ) ಕ. ರಾ. ರ. ಸಾ. ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುವ ನಿರ್ವಾಹಕ ಹಾಗೂ ಚಾಲಕರು ಪ್ರಯಾಣಿಕರೊಂದಿಗೆ ಸರಿಯಾದ ರೀತಿಯಲ್ಲಿ ನಡೆದುಕೊಳ್ಳುವಂತೆ ಸರ್ಕಾರ ಮಾರ್ಗದರ್ಶನ ನೀಡಲು ಕ್ರಮಕೈಕೊಳ್ಳಲಾಗವುದೆ.

ಈ) ಹಾಗಿದ್ದಲ್ಲಿ ಅಂತಹ ಮಾರ್ಗದರ್ಶನಗಳಾವುವು ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) ಚಾಲಕ ನಿರ್ವಾಹಕರು ದುರ್ನಡತೆಯಿಂದ ವರ್ತಿಸುತ್ತಿರುವ ಬಗ್ಗೆ ಕೆಲವು ದೂರುಗಳು ಬಂದಿರುತ್ತದೆ.

ಆ) 1991-92ರಲ್ಲಿ ಸಿಬ್ಬಂದಿಯ ವಿರುದ್ಧ 624 ದೂರುಗಳು ದುರ್ವರ್ತನೆಗಳ ಬಗ್ಗೆ ವರದಿಯಾಗಿದೆ ಪ್ರಸ್ತುತ ಆರ್ಥಿಕ ವರ್ಷದಲ್ಲಿ ಎಪ್ರಿಲ್, 92 ರಿಂದ ಡಿಸೆಂಬರ್ 92 ರವರೆಗೆ 465 ದೂರುಗಳು ಬಂದಿರುತ್ತವೆ. ದೂರುಗಳು ಗುರುತರವಾಗಿ ಸಿದ್ಧಪಟ್ಟಂತಹ ಚಾಲಕರು ನಿರ್ವಾಹಕರಿಗೆ ದಂಡವನ್ನು ವಿಧಿಸಲು ಕ್ರಮ ಕೈಗೊಳ್ಳಲಾಗುತ್ತದೆ.

ಇ) ಹೌದು.

ಈ) ಚಾಲಕ ನಿರ್ವಾಹಕರನ್ನು ಕೆಲಸಕ್ಕೆ ನೇಮಕಾತಿ ಮಾಡುವಾಗ ತರಬೇತಿ ನೀಡುತ್ತಲಿದ್ದು ಅದರಲ್ಲಿ ಪ್ರಯಾಣಿಕರೊಂದಿಗೆ ಸೌಜನ್ಯ ವರ್ತಿಸುವ ಬಗ್ಗೆ ತಿಳುವಳಿಕೆ ನೀಡಲಾಗುತ್ತಿದೆ. ದುರ್ನಡತೆಯ ಬಗ್ಗೆ ಬರುವ ದೂರುಗಳವನ್ನು ಕಡಿಮೆ ಮಾಡುವ ಸಲುವಾಗಿ ಪುನಶ್ಚೇತನ ತರಬೇತಿ ಕಾರ್ಯಕ್ರಮ ಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಚಾಲಕ: ನಿರ್ವಾಹಕರಿಗೆ ಇನ್‌ಹೌಸ ತರಬೇತಿಗಳನ್ನು ಏರ್ಪಡಿಸುವ ಕುರಿತು, ಅದರಲ್ಲಿ ಪ್ರಯಾಣಿಕರೊಂದಿಗೆ ಸೌಜನ್ಯದಿಂದ ವರ್ತಿಸುವ ವಿಷಯವನ್ನು ಪ್ರಾಮುಖ್ಯವಾಗಿ ಕಲಿಸುವ ಯೋಜನೆ ಇದೆ. ಇದಲ್ಲದೆ ಸೌಜನ್ಯದಿಂದ ವರ್ತಿಸದಿದ್ದ ಸಿಬ್ಬಂದಿಯ ಅನುಸರಿಸಲಾಗುತ್ತಿದೆ.

ಶ್ರೀ ಮುನಿನರಸಿಂಹಯ್ಯ : ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಇರತಕ್ಕಂಥ ಚಾಲಕರು ಮತ್ತು ನಿರ್ವಾಹಕರು ಸಾರ್ವಜನಿಕರ ಬಗ್ಗೆ ಉತ್ತಮ ರೀತಿಯಲ್ಲಿ ವರ್ತನೆ ಮಾಡುತ್ತಿಲ್ಲ, ಇದರ ಬಗ್ಗೆ ಅನೇಕ ದೂರುಗಳು ತಮ್ಮ ಗಮನಕ್ಕೆ ಮತ್ತು ಇಲಾಖೆಯ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಕ್ಕೆ ಇದರ ಬಗ್ಗೆ 624 ದೂರುಗಳು ಬಂದಿದ್ದು 465 ಕೇಸುಗಳನ್ನು ದಾಖಲೆ ಮಾಡಿದ್ದೇವೆಂದು ಮಾನ್ಯ ಸಚಿವರು ತಿಳಿಸುತ್ತಾ ಇದ್ದಾರೆ. ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇವೆ. ವಿಶೇಷವಾಗಿ ನಗರ ಸಾರಿಗೆ ಬಸ್‌ಗಳಲ್ಲಿ ಚಾಲಕರು ಏನು ಇದ್ದಾರೆ ಆವರು ಬಸ್ ನಿಲುಗದೆಗೆ ಗೊತ್ತುಪಡಿಸಿದ ಸ್ಥಳಗಳಲ್ಲಿ ನಿಲ್ಲಿಸದೇ ಯದ್ವಾತದ್ವಾ ಅವರ ಇಚ್ಛಾನುಸಾರ ಬಸ್‌ಗಳನ್ನು ನಿಲ್ಲಿಸುವುದರಿಂದ ಅನೇಕ ದುರಂತಗಳು ಸಾವು ನೋವುಗಳು ಮತ್ತು ಬಸ್ ಅಪಘಾತಕ್ಕೆ ಈಡಾಗುತ್ತಿವೆ. ಇದಕ್ಕೆ ಸನ್ಮಾನ್ಯ ಸಾರಿಗೆ ಸಚಿವರು ಏನಾದರೂ ಕಟ್ಟುನಿಟ್ಟಿನ ಕ್ರಮ ಕೈಗೊಂಡು ಆ ಒಂದು ನಗರ ಸಾರಿಗೆ ಬಸ್‌ಗಳಿಗೆ ನಿಗದಿಯಾದಂತಹ ಸ್ಥಳದಲ್ಲಿ ಬಸ್‌ಗಳನ್ನು ನಿಲ್ಲಿಸತಕ್ಕ ವ್ಯವಸ್ಥೆಯನ್ನು ಮತ್ತು ಆದೇಶವನ್ನು ಆ ಚಾಲಕರಿಗೆ ಮತ್ತು ನಿರ್ವಾಹಕರಿಗೆ ನೀಡುತ್ತೀರಾ ಎಂದು ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ. ಮತ್ತು ಈ ಕೆ. ಎಸ್. ಆರ್. ಟಿ. ಸಿ ಬಸ್‌ಗಳಲ್ಲಿ ಅದರಲ್ಲಿಯೂ ಗ್ರಾಮಾಂತರ ಪ್ರದೇಶಗಳಲ್ಲಿ ಓಡಾಟಮಾಡತಕ್ಕಂಥ ಬಸ್‌ಗಳಲ್ಲಿ ಬೋರ್ಡ್‌ಗಳನ್ನು ಹಾಕದೇ ಮತ್ತು ಸೆಟಲ್ ಬಸ್ ಎಂದು ಏನು ಓಡಾಟ ಆಗುತ್ತಾ ಇರುತ್ತದೆ, ಆ ಬಸ್‌ನಲ್ಲಿ ವೇಗಧೂತ ಎಂದು ಬೋರ್ಡ್ ಹಾಕಿಕೊಂಡು ಇವತ್ತು ಅನೇಕ ಬಸ್‌ಗಳು ಗ್ರಾಮಾಂತರ ಪ್ರದೇಶದ ಜನರಿಗೆ ತೊಂದರೆ ಮಾಡಿ ಓಡಾಡುತ್ತಿವೆ. ಇದರ ಬಗ್ಗೆ ಕೂಡ ಅಂತಹ ಚಾಲಕ ಮತ್ತು ನಿರ್ವಾಹಕರ ಮೇಲೆ ಕಟ್ಟುನಿಟ್ಟಿನ ಕ್ರಮವನ್ನು ಕೈಗೊಳ್ಳುವುದಕ್ಕೆ ಆದೇಶವನ್ನು ಕೊಡುತ್ತೀರಾ ಎಂದು ತಮ್ಮ ಮೂಲಕ ಸಾರಿಗೆ ಸಚಿವರನ್ನು ಕೇಳುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ ಮಾತು ನಿಜ, ಕಂಪ್ಲೇಂಟ್ ಇದೆ. ನಮ್ಮ ಕಂಡಕ್ಟರ್ ಮತ್ತು ಡ್ರೈವರ್‌ಗಳ ಬಿಹೇವಿಯರ್ ಸರಿಯಲ್ಲ ಎಂಬ ಮಾತು ಕಂಡುಬಂದಿದೆ. ನಿಮ್ಮ ಕಷ್ಟ ನಮಗೆ ಅರ್ಥವಾಗುತ್ತದೆ. ಅದಕ್ಕೆ ನಾವೇನು ಮಾಡಿದ್ದೇವೆ ಎಂದರೆ, ಎಂಟು ಪಾಯಿಂಟ್ ಪ್ರೋಗ್ರಾಮ್ ಹಾಕಿದ್ದೇವೆ. ಪ್ರತಿ ಒಂದು ಡಿಪೋಗೆ ನಾವು ಸೂಚನೆ ಕಳಿಸಿದ್ದೇವೆ. ಇದರ ಬಗ್ಗೆ ಸಾಕಷ್ಟು ಕಂಪ್ಲೇಂಟ್ ಬಂದಾಗ ಅದನ್ನು ರಿಜಿಸ್ಟರ್ ಮಾಡುತ್ತಿದ್ದೇವೆ. ಹೋದ ವರ್ಷ 624 ಕೇಸ್ ಡ್ರೈವರ್ ಮತ್ತು ಕಂಡಕ್ಟರ್ ಅವರ ಮಿಸ್ ಬಿಹೇವಿಯರ್‌ವಿರುದ್ಧ ಹಾಕಿದ್ದೇವೆ. ಈ ವರ್ಷ 1992-93ರಲ್ಲಿ ನಾವು 465 ಕೇಸ್‌ಗಳನ್ನು ಹಾಕಿದ್ದೇವೆ. ಅದರಲ್ಲಿ ಎಷ್ಟೋ ಜನರಿಗೆ ನಮ್ಮ ಮಾಹಿತಿ ಪ್ರಕಾರ ಸಸ್ಪೆಂಡ್ ಮಾಡಿದ್ದೇವೆ, ಪೆನಾಲ್ಟಿ ಹಾಕಿದ್ದೇವೆ ಅವರ ಇನ್‌ಕ್ರಿಮೆಂಟ್ ರೆಡ್ಯೂಸ್ ಮಾಡಿದ್ದೇವೆ. ಈ ಪ್ರಕಾರ ನಾವು ಆಕ್ಷನ್ ತೆಗೆದುಕೊಳ್ಳುತ್ತಿದ್ದೇವೆ. ಮೊನ್ನೆ ಮಾನ್ಯ ಕರಿಯಪ್ಪನವರು ಒಬ್ಬ ಡ್ರೈವರ್ ಮಿಸ್ ಬಿಹೇವಿಯರ್ ಮಾಡಿದ ಬಗ್ಗೆ ಕಂಪ್ಲೇಂಟ್ ತಂದಿದ್ದರು ಅವನನ್ನು ಸಸ್ಪೆಂಡ್ ಮಾಡಿ ಅದರ ಬಗ್ಗೆ ಕಾರ್ಯ ಮಾಡುತ್ತಿದ್ದೇವೆ. ಎಲ್ಲೆಲ್ಲಿ ವ್ಯವಸ್ಥೆ ಸರಿಯಾಗಿಲ್ಲ ಅಲ್ಲಿ ಸರಿಯಾದ ರೀತಿಯಿಂದ ನಾವು ನೋಡಿಕೊಳ್ಳುತ್ತಿದ್ದೇವೆ. ಎಲ್ಲಿ ಸೂಪರ್‌ವೈಸರ್ ಇಲ್ಲ, ಅಲ್ಲಿಸೂಪರ್‌ವೈಸರ್‌ಅನ್ನು ಕಳಿಸುತ್ತಿದ್ದೇವೆ. ಮತ್ತು ಸರಿಯಾಗಿ ದಕ್ಷತೆಯಿಂದ ಯಾವ ಕಂಪ್ಲೇಂಟ್ ಪಬ್ಲಿಕ್ ಕಡೆಯಿಂದ ಬರುತ್ತಿದೆ ಅದನ್ನು ದೂರ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆಂದು ಈ ಸಮಯದಲ್ಲಿ ಆಶ್ವಾಸನೆ ಕೊಡುತ್ತಿದ್ದೇನೆ.

ಶ್ರೀ ಮುನಿನರಸಿಂಹಯ್ಯ :- ಮಾನ್ಯ ಅಧ್ಯಕ್ಷರೆ,ಗ್ರಾಮಾಂತರ ಪ್ರದೇಶಕ್ಕೆ ಓಡಾಡತಕ್ಕ ಬಸ್‌ಗಳು ವಾರದಲ್ಲಿ ಎರಡು ದಿವಸ ಓಡಾಟವನ್ನು ನಿಲ್ಲಿಸುತ್ತವೆ. ಇದರ ಬಗ್ಗೆ ನಾವು ಆ ಇಲಾಖೆಯ ಅಧಿಕಾರಿಗಳನ್ನು ಭೇಟಿ ಮಾಡಿದಾಗ, ಆ ಚಾಲಕರು ಮತ್ತು ನಿರ್ವಾಹಕರು ವಾರಗಟ್ಟಲೆ ರಜಾ ಹಾಕುತ್ತಿದ್ದಾರೆ ನಾವೇನು ಮಾಡುವುದು ಎಂದು ಅಧಿಕಾರಿಗಳು ನಮಗೆ ತಿಳಿಸಿದ್ದಾರೆ. ಈ ರೀತಿ ಅವರು ಒಂದನೇ ತಾರೀಖಿನ ಸಂಬಳವನ್ನು ಪಡೆದ ನಂತರ ವಾರಗಟ್ಟಲೆ ಕೆಲಸಕ್ಕೆ ಹಾಜರಾಗದ ಕ್ರಮ ಏನು ಇದೆ,ಇದರಿಂದ ಬಸ್ಸಗಳ ಓಡಾಟ ನಿಂತು ಹೋಗಿ ಸಾರ್ವಜನಿಕರ ಓಡಾಟಕ್ಕೆ ತೊಂದರೆ ಆಗುತ್ತಿದೆ. ಇದರ ಬಗ್ಗೆ ಮಾನ್ಯ ಮಂತ್ರಿಯವರು ಕಟ್ಟುನಿಟ್ಟಿನ ಕ್ರಮ ತೆಗೆದುಕೊಂಡು ಅಥವಾ ಅವರು ರಜದಲ್ಲಿ ಹೋದಾಗ ಆ ಸ್ಥಳದಲ್ಲಿ ಬೇರೆ ಚಾಲಕ ನಿರ್ವಾಹಕರನ್ನು ಮಾಡಿಕೊಂಡು ಒಂದು ಹೆಚ್ಚುವರಿ ಚಾಲಕ ನಿರ್ವಾಹಕರನ್ನು ಇಟ್ಟುಕೊಂಡು ಆ ಬಸ್‌ಗಳನ್ನು ಓಡಿಸುವಂತಹ ವ್ಯವಸ್ಥೆಯನ್ನು ಏನಾದರೂ ಇಲಾಖೆಯಲ್ಲಿ ಮಾಡಿದ್ದೀರ ಎಂದು ಈ ಸಂದರ್ಭದಲ್ಲಿ ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ ಮಾನ್ಯ ಮಂತ್ರಿಗಳನ್ನು.

ಶ್ರೀ ಭೀಮಣ್ಣಖಂಡ್ರೆ: ಮಾನ್ಯ ಅಧ್ಯಕ್ಷರೆ, ಮೊದಲಿನಿಂದ ಈ ಆಬ್ಸೆಂಟ್ಸ್ ಜಾಸ್ತಿ ಆದ ಕಾರಣ ಸ್ವಲ್ಪ ತೊಂದರೆ ಉಂಟಾಗಿದೆ. ಮೊದಲು 20 ಪರ್ಸೆಂಟ್ ಆಬ್ಸೆಂಟ್ಸ್ ಇದ್ದು ಈಗ ನಾವು ಎರಡು ತಿಂಗಳಲ್ಲಿ ಅದನ್ನು ರೆಡ್ಯೂಸ್ ಮಾಡಿ, 7 ಪರ್ಸೆಂಟ್ ಆಬ್ಸೆಂಟ್ ಇಟ್ಟಿದ್ದಾರೆ. ಸಾಧಾರಣ 5 ಪರ್ಸೆಂಟ್ ಆಬ್ಸೆಂಟ್ ಇದ್ದೇ ಇರುತ್ತದೆ. ಅದಕ್ಕೆ ಎಷ್ಟೋ ಕಾರಣಗಳು ಇದ್ದೇ ಇರುತ್ತದೆ. ಆದ್ದರಿಂದ ಸಾಧ್ಯವಾದಷ್ಟು ಆಬ್ಸೆಂಟಿಸಂ ಕಡಿಮೆ ಮಾಡಿ ಅದನ್ನು ಯಾವ ಪ್ರಕಾರ ವ್ಯವಸ್ಥೆ ಮಾಡಬೇಕೊ ಅದನ್ನು ಮಾಡುತ್ತೇನೆ.

ಶ್ರೀ ಮುನಿನರಸಿಂಹಯ್ಯ: ಮಾನ್ಯ ಅಧ್ಯಕ್ಷರೇ, ಕೊನೆಯ ಪ್ರಶ್ನೆಕೇಳುತ್ತಿದ್ದೇನೆ. ಈ ರಸ್ತೆ ಸಾರಿಗೆ ಸಂಸ್ಥೆಯ ಬಸ್‌ಗಳು ನಮ್ಮ ಗ್ರಾಮಾಂತರ ಪ್ರದೇಶಕ್ಕೆ ಕೊನೆಯ ಟ್ರಿಪ್ ರಾತ್ರಿಯಲ್ಲಿ ತಂಗಲಿಕ್ಕೆ ಹಳ್ಳಿಗಳಿಗೆ ಏನು ಹೋಗುತ್ತವೆ, ಆ ಟ್ರಿಪ್‌ನಲ್ಲಿ ಚಾಲಕರು ಬೇರೆ ಖಾಸಗಿ ಯವರಿಗೆ ಡ್ರೈವಿಂಗ್

ಕೊಟ್ಟು ಅವರ ಹಿಂದುಗಡೆ ಹೋಗಿ ಕುಳಿತಿರುತ್ತಾರೆ ಎಂದು ಅನೇಕ ದೂರುಗಳು ಬಂದಿದೆ. ಇದರ ಬಗ್ಗೆ ತಾವು ಬಹಳ ಎಚ್ಚರಿಕೆಯಿಂದ ಕಟ್ಟುನಿಟ್ಟಾಗಿ ಆದೇಶವನ್ನು ಕೊಟ್ಟು ಅಂತಹ ಬಸ್‌ಗಳಲ್ಲಿ ಚಾಲಕರು ಹಿಂದುಗಡೆ ಕುಳಿತುಕೊಂಡು ಖಾಸಗಿಯವರಿಗೆ ಬಸ್‌ನಲ್ಲಿ ಪ್ರಯಾಣ ಮಾಡತಕ್ಕ ಂಥ ಪ್ರಯಾಣಿಕರಿಗೆ, ಯುವಕರಿಗೆ ಬಸ್ ಒಡಿಸುವುದಕ್ಕೆ ಅವಕಾಶ ಎನು ಮಾಡಿಕೊಡುತ್ತಾರೆ, ಅಂತಹವುಗಳನ್ನು ತಾವು ಪರಿಶೀಲನೆ ಮಾಡಿ ಅಂತಹವರ ಮೇಲೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕೆಂದು ಕೊನೆಯದಾಗಿ ತಮ್ಮ ಮೂಲಕ ಮಾನ್ಯ ಮಂತ್ರಿಯವರನ್ನು ಪ್ರಶ್ನೆ ಮಾಡುತ್ತಿದ್ದೇನೆ.

ಶ್ರೀ ಭೀಮಣ್ಣ ಖಂಡ್ರೆ : ಮಾನ್ಯ ಸದಸ್ಯರು ಒಳ್ಳೆಯ ಸಲಹ ಕೊಟ್ಟಿದ್ದಾರೆ. ನಾವು ಅದನ್ನು ಸರಿಯಾಗಿ ಅರ್ಥ ಮಾಡಿಕೊಂಡು ಯಾವುದೇ ರೀತಿಯ ಕಂಪ್ಲೆಂಟ್ ಬರದಂತೆ ವ್ಯವಸ್ಥೆ ಮಾಡುತ್ತೇವೆ.

ಅಯೋಧ್ಯೆ ಘಟನೆಯ ಹಿನ್ನೆಲೆಯಲ್ಲಿ ನಡೆದ ಮತೀಯ ಗಲಭೆ

283 (1486) ಶ್ರೀ ನಸೀರ್ ಅಹಮ್ಮದ್ (ಬಿನ್ನಿಪೇಟೆ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :-

ಅ) ಅಯೋಧ್ಯ ಘಟನೆಯ ಹಿನ್ನಲೆಯಲ್ಲಿ ಇತ್ತೀಚಿಗೆ ನಡೆದ ಮತೀಯ ಗಲಭೆಯಲ್ಲಿ ಮೃತಪಟ್ಟವರ ಸಂಖ್ಯೆ ಎಷ್ಟು ?

ಆ) ಅಂತಹವರಿಗೆ ಇದುವರೆಗೆ ನೀಡಲಾದ ಪರಿಹಾರಧನ ಎಷ್ಟು ? (ಜಿಲ್ಲಾವಾರು ವಿವರ ನೀಡುವುದು).

ಇ) ಸದರಿ ಗಲಭೆಯಲ್ಲಿ ಅಂಗವಿಕಲರಾದವರ ಸಂಖ್ಯೆ ಹಾಗೂ ಅವರುಗಳಿಗೆ ನೀಡಲಾದ ಪರಿಹಾರಧನ ಎಷ್ಟು? (ಜಿಲ್ಲಾವಾರು ವಿವರ ನೀಡುವುದು).

ಈ) ಸದರಿ ಗಲಭೆಯಲ್ಲಿ ಗಾಯಗೊಂಡವರ ಸಂಖ್ಯೆ ಹಾಗೂ ಅವರುಗಳಿಗೆ ನೀಡಲಾದ ಪರಿಹಾರಧನ ಎಷ್ಟು ? (ಜಿಲ್ಲಾವಾರು ವಿವರ ನೀಡುವುದು).

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) :

ಅ) ಮೃತಪಟ್ಟವರ ಸಂಖ್ಯೆ 78. (ಜಿಲ್ಲಾವಾರು ವಿವರ ಅನುಬಂಧದಲ್ಲಿ ನೀಡಲಾಗಿದೆ).

ಆ) ಮೃತಪಟ್ಟವರ ಕುಟುಂಬದವರಿಗೆ ಇದುವರೆಗೆ ಒಟ್ಟು 118 ಲಕ್ಷ ರೂಪಾಯಿ ಪರಿಹಾರಧನ ವಿತರಿಸಲಾಗಿದೆ. (ಜಿಲ್ಲಾವಾರು ವಿವರ ಅನುಬಂಧದಲ್ಲಿ ನೀಡಲಾಗಿದೆ).

ಇ) 1) ಶಾಶ್ವತ ಅಂಗವಿಕರಾದವರ ಸಂಖ್ಯೆ 10 ಹಾಗೂ ಅವರಿಗೆ ನೀಡಲಾದ ಪರಿಹಾರಧನ ರೂ. 1,50,000-00.

2) ತಾತ್ಕಾಲಿ ಅಂಗವಿಕಲರಾದವರ ಸಂಖ್ಯೆ 193 ಹಾಗೂ ಅವರಿಗೆ ನೀಡಲಾದ ಪರಿಹಾರಧನ ರೂ. 4,82,500.00. (ಜಿಲ್ಲಾವಾರು ವಿವರ ಅನುಬಂಧದಲ್ಲಿ ನೀಡಲಾಗಿದೆ).

ಈ) ಗಾಯಗೊಂಡವರ ಸಂಖ್ಯೆ 408 ಹಾಗೂ ಅವರುಗಳಿಗೆ ನೀಡಲಾದ ಒಟ್ಟು ಪರಿಹಾರಧನ ರೂ. 3,07,000.00. (ಜಿಲ್ಲಾವಾರು ವಿವರ ಅನುಬಂಧದಲ್ಲಿ ನೀಡಲಾಗಿದೆ).

ಶ್ರೀ ನಜೀರ ಅಹಮದ್ :- ಮಾನ್ಯ ಅಧ್ಯಕ್ಷರೆ, ನಾನು ಕೇಳಿರುವ ಪ್ರಶ್ನೆಗೆ ಉತ್ತರ